# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 3-12-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## 2022-23 ರ FCI ಭತ್ತ ಖರೀದಿ ಇದುವರೆಗೆ 13 ಶೇಕಡಾ ಹೆಚ್ಚಳ

ಸರಕಾರಿ ಭತ್ತ ಖರೀದಿ ಏಜೆನ್ಸಿ ಎಫ್.ಸಿ.ಐ 2022 ರಲ್ಲಿ ಇದುವರೆಗೆ 32.9 ಮಿಲಿಯನ್ ಟನ್ ಭತ್ತ ಖರೀದಿಸಿದ್ದು, ಇದು ಹಿಂದಿನ ವರ್ಷದ ಇದೇ ಅವಧಿಯ ಖರೀದಿಗಿಂತ 13 ಶೇಕಡಾ ಹೆಚ್ಚಳವೆನ್ನಲಾಗಿದೆ. 2022-23 ರಲ್ಲಿ ಸರಕಾರ 90 ಮಿಲಿಯನ್ ಟನ್ ಭತ್ತ ಖರೀದಿಯ ಗುರಿ ಹೊಂದಿದೆಯೆನ್ನಲಾಗಿದೆ.

## ಹೊಸ ಬೆಳೆಯ ಕೆಂಪು ಒಣಮೆಣಸಿನಕಾಯಿ ಆವಕ

ಅಲ್ಪ ಪ್ರಮಾಣದಲ್ಲಿ ಕೆಂಪು ಒಣ ಮೆಣಸಿನಕಾಯಿ ಮಾರುಕಟ್ಟೆಗೆ ಆವಕವಾಗುತ್ತಿದ್ದು ದರ ಸ್ವಲ್ಪ ಮಟ್ಟಿಗೆ ದುರ್ಬಲಗೊಳ್ಳುತ್ತಿದೆ. ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲಿ ಹೊಸ ಬೆಳೆಯ ಆವಕ ಆರಂಭವಾಗಿದ್ದು ಹಿಂದಿನ ವರ್ಷ ಬೆಳೆಗಿಂತ ಕಡಿಮೆ ಆವಕವಾಗುತ್ತಿದೆಯೆನ್ನಲಾಗಿದೆ. ಹೊಸ ಬೆಳೆ ಇಳಿಕೆಯಾಗುವ ಸಾಧ್ಯತೆಗಳಿವೆ. ಆಂಧ್ರಪ್ರದೇಶ, ತೆಲಂಗಾಣ ಗಳಲ್ಲಿ ಇನ್ನು ಕಟಾವು ಆರಂಭವಾಗಿ ಆವಕ ಪ್ರಾರಂಭವಾಗಲಾರಂಭವಾಗಬಹುದು. ಹಾಗೆಯೇ ಕರ್ನಾಟಕದ ಬ್ಯಾಡಗಿ ಮೆಣಸಿನ ಹೊಸ ಬೆಳೆಯ ಆವಕ ಪ್ರಾರಂಭವಾಗಲಿದ್ದು ದರ ಇಳಿಕೆಯಾಗುವ ಸಾಧ್ಯತೆಗಳಿವೆ. ಮುಂದೆ ಬೆಳೆಯ ಪ್ರಮಾಣವನ್ನುಸರಿಸಿ ದರ ವ್ಯತ್ಯಾಸಗೊಳ್ಳಬಹುದು.